**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,**
**ಶ್ರೀರಂಗಪಟ್ಟಣ.**

ಸಿ.ಸಿ.ಃ 293/2018

ಪಿ. ಡಬ್ಲ್ಯುಃ 02
ಸಿ. ಡಬ್ಲ್ಯುಃ 03

| | | |
|---|---|---|
| ಸಾಕ್ಷಿದಾರರ ಹೆಸರು | ಃ | ನಾಗಮ್ಮ |
| ತಂದೆ/ಪತಿಯ ಹೆಸರು | ಃ | ಲಕ್ಷ್ಮಣ |
| ವಯಸ್ಸು | ಃ | 65 ವರ್ಷ |
| ವೃತ್ತಿ | ಃ | ಕೂಲಿ ಕೆಲಸ |
| ವಾಸ | ಃ | ಕೊಡಿಯಾಲ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 27.02.2023

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಸಾಕ್ಷಿಗೆ ಸ್ಥಳ ಮಹಜರ್ ತೋರಿಸಲಾಗಿ ಅದರಲ್ಲಿ ತನ್ನ ಹೆಬ್ಬೆಟ್ಟಿನ ಗುರುತು ಇರುವುದನ್ನು ನೋಡಿ ಗುರುತಿಸಿದ್ದು ಸದರಿ ಸ್ಥಳ ಮಹಜರ್ ಅನ್ನು ನಿಪಿ.1 ಎಂದು ಗುರುತಿಸಲಾಯಿತು. ನಿಪಿ.1 ಕ್ಕೆ ನಾನು ಪೋಲೀಸ್ ಠಾಣೆಯಲ್ಲಿ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ನಿಪಿ.1 ಕ್ಕೆ ನಾನು ಯಾವ ಕಾರಣಕ್ಕೆ ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೇನು ಎಂದು ಗೊತ್ತಿಲ್ಲ. ನಿಪಿ.1 ರಲ್ಲಿನ ಅಂಶಗಳು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ನಿಪಿ.1 ಕ್ರಮ ಜರುಗಿಸಿ ವಶಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ**

ದಿಃ 22.11.2017 ರಂದು ಪಿರ್ಯಾದಿ ಗೌರಮ್ಮ ನವರ ವಾಸದ ಮುಂದಿನ ಸ್ಥಳದಲ್ಲಿ ಗೌರಮ್ಮ ತೋರಿಸಿದಜಾಗದಲ್ಲಿ ಪೋಲೀಸರು ಬೆಳಿಗ್ಗೆ 10.00-10.45 ಸಮಯದಲ್ಲಿ ನನ್ನ ಮತ್ತು ಪುಟ್ಟಮ್ಮನವರ ಸಮಕ್ಷ್ಮ ಸ್ಥಳ ಮಹಜರ್ ಮಾಡಿದ್ದು ಆ ಸಮಯದಲ್ಲಿ ಗೌರಮ್ಮ ಹಾಜರುಪಡಿಸಿದ ನ್ಯಾಯಾಲಯದ ಮುಂದಿರುವ ನೀಲಿ ಬಣ್ಣದ ಪ್ಲಾಸ್ಟಿಕ್ ಪೈಪ್ ಅನ್ನು ನಿಪಿ.1 ಮಹಜರ್ ಬರವಣಿಗೆ ಮಾಡಿ ತಮ್ಮ ವಶಕ್ಕೆ ಪಡೆದರು ಆ ಸಮಯದಲ್ಲಿ ನಾನು ನಿಪಿ.1 ಕ್ಕೆ ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಸಮಕ್ಷಮ ನಿಪಿ.1 ಮಹಜರ್ ಮಾಡಿ ನ್ಯಾಯಾಲಯದ ಮುಂದಿರುವ ಪ್ಲಾಸ್ಟಿಕ್ ಪೈಪನ್ನು ಪೋಲೀಸರು ತಮ್ಮ ವಶಕ್ಕೆ ಪಡೆದಿದ್ದರೂ ಕೂಡ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ನಿಪಿ.1 ಮಹಜರ್ ಸಂಬಂಧ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಏನು ಇಲ್ಲ

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.